ಸಾಕ್ಷಿದಾರರಿಗೆ ದಿನಾಂಕಃ 11.01.2017 ರಂದು ಕರೆಯಿಸಿ ಪ್ರಮಾಣ ವಚನ ಕೊಡಿಸಲಾಯಿತು.

**ಪಾಟೀಸವಾಲು ಪ್ರತಿವಾದಿಯಪರ ವಕೀಲರಿಂದಃ-**

ನಾನು ದ್ವಿತೀಯ ಪಿ.ಯು.ಸಿ.ವರೆಗೆ ವ್ಯಾಸಂಗ ಮಾಡಿದ್ದೇನೆ. ನಮ್ಮ ಮನೆ ಹುಬ್ಬಳ್ಳಿಯ ವೀರಾಪೂರ ಓಣಿಯಲ್ಲಿ ಇದೆ. ನನ್ನ ಪತಿ ಟ್ರಾನ್ಸ್‌ಪೋರ್ಟ ಮತ್ತು ಟೈಯರ್ ಬಿಜಿನಿನೆಸ್ ಮಾಡುತ್ತಿದ್ದಾರೆ ಎನ್ನುವುದು ನಿಜ. ನನ್ನ ಹೆಸರಿಗೆ ಯಾವುದೇ ಜಮೀನುಗಳು ಇಲ್ಲ ಎನ್ನುವುದು ನಿಜ. ಈ ಕೇಸನ್ನು ಹಾಕಲು ವಕೀಲರೆ ಮಾಹಿತಿ ನೀಡಿದ್ದಾರೆ. ವಾದ ಪತ್ರದಲ್ಲಿ ಏನು ಬರೆದಿದೆ ಎನ್ನುವುದು ಗೊತ್ತು. ಕೆಲವು ದಿನಾಂಕಗಳು ನೆನಪಿಲ್ಲ ಉಳಿದ ವಿಷಯಗಳೆಲ್ಲ ನೆನಪಿದೆ. ನನ್ನ ಪ್ರಮಾಣ ಪತ್ರವನ್ನು ತಯಾರಿಸಲು ನಮ್ಮ ವಕೀಲರು ಮಾಹಿತಿ ನೀಡಿದ್ದಾರೆ. ದಾವಾ ಜಮೀನಿನ ಸರ್ವೇ ನಂಬರ, ಕ್ಷೇತ್ರ ಮತ್ತು ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಾನು ನೋಡಿಲ್ಲ ಎನ್ನುವುದು ಸುಳ್ಳು. ದಾವಾ ಆಸ್ತಿಯನ್ನು ನೋಡಲು ನಾನು ಹೋಗಿದ್ದಂತಹ ದಿನಾಂಕವನ್ನು ಹೇಳಲು ಬರುವುದಿಲ್ಲ. ದಾವಾ ಆಸ್ತಿ ಉಣಕಲ್ ಕ್ರಾಸ್‌ನಿಂದ ಒಳಗಡೆ ಹೋದರೆ ಸಿಗುತ್ತದೆ. ದಾವಾ ಆಸ್ತಿ ಯಾವ ಊರಿನ ಹದ್ದಿಯಲ್ಲಿ ಇದೆ ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿಯನ್ನು ನೋಡಲು ನಾನು ಮತ್ತು ನನ್ನ ಪತಿ ಹೋಗಿದ್ದೆವು. ದಾವಾ ಆಸ್ತಿಗೆ ಸಂಬಂಧಿಸಿ ಆದಂತಹ ವ್ಯವಹಾರದ ದಿನಾಂಕ, ತಿಂಗಳು ಮತ್ತು ಇಸ್ವಿ ನೆನಪಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ವ್ಯವಹಾರ ಎಲ್ಲಿ ಆಯಿತು ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ವ್ಯವಹಾರವಾಗುವಾಗ ಯಾರ್ಯಾರು ಹಾಜರಿದ್ದರು ಎನ್ನಲಾಗಿ ಅದು ನೆನಪಿಲ್ಲ ಎನ್ನುವರು. ಕ್ರಯ ಕರಾರು ಪತ್ರ ನೋಂದಣಿ ಆಗುವುದಕ್ಕಿಂತ ಪೂರ್ವದಲ್ಲಿ ನಮ್ಮ ಪತಿ ಮತ್ತು ಪ್ರತಿವಾದಿಯರು ಮಾತುಕತೆ ಮಾಡಿದ್ದರು ಆದರೆ ಆ ರೀತಿ ಮಾತುಕತೆ ಮಾಡಿದ ದಿನಾಂಕ, ತಿಂಗಳು ಮತ್ತು ವರ್ಷ ಯಾವುದು ಎನ್ನುವುದು ನೆನಪಿಲ್ಲ. ನಾನು, ನನ್ನ ಪತಿ ಹಾಗೂ ನನ್ನ ಪತಿಯ ಸ್ನೇಹಿತರು ಉಪನೋಂದಣಾಧಿಕಾರಿಗಳ ಕಛೇರಿಗೆ ಹೋಗಿದ್ದೆವು.

ಕ್ರಯ ಕರಾರು ಪತ್ರವನ್ನು ಯಾರು ಬರೆದರು ಎಂದು ಹೇಳಲು ಬರುವುದಿಲ್ಲ. ಕ್ರಯ ಕರಾರು ಪತ್ರ ನೋಂದಣಿಯಾದ ದಿವಸ ನೀವು ಎಷ್ಟು ಹಣವನ್ನು ಕೊಟ್ಟಿರಿ ಎನ್ನಲಾಗಿ ಅದು ನನಗೆ ನೆನಪಿಲ್ಲ ಎನ್ನುವರು. ನೀವು 4,75,000-00 ರೂಪಾಯಿಗಳ ಚೆಕ್ಕನ್ನು ಕೊಟ್ಟಿರಿ ಎನ್ನಲಾಗಿ ನಾವು ಚೆಕ್ಕನ್ನು ಕೊಟ್ಟಿದ್ದೇವೆ ಆದರೆ ಎಷ್ಟು ಹಣಕ್ಕೆ ಕೊಟ್ಟಿದ್ದೇವೆ ಎನ್ನುವುದು ನೆನಪಿಲ್ಲ ಎನ್ನುವರು. ನೀವು ಕೊಟ್ಟು ಚೆಕ್ಕು ಪ್ರಥಮ ಭಾರಿಗೆ ಪ್ರಜೆಂಟ್ ಮಾಡಿದಾಗ ನಗದೀಕರಣಗೊಳ್ಳಲಿಲ್ಲ ಆದರೆ ಎರಡನೇಯ ಭಾರಿ ಪ್ರಜೆಂಟ್ ಮಾಡಿದಾಗ ನಗದೀಕರಣ ಗೊಂಡಿತು ಎನ್ನಲಾಗಿ ಅದು ಗೊತ್ತಿಲ್ಲ ಎನ್ನುವರು. ನಿಪಿ-2ರಲ್ಲಿ ಪ್ರತಿವಾದಿಯ ಹೆಸರು ನಮೂದು ಆಗಿಲ್ಲ ಎನ್ನುವುದು ನಿಜ.

1ನೇ ಪ್ರತಿವಾದಿಗೆ 4 ಜನ ಹೆಣ್ಣು ಮಕ್ಕಳಿದ್ದಾರೆ ಎನ್ನುವುದು ಅವರಲ್ಲಿ ಒಬ್ಬ ಮಗಳಿಗೆ ವಿವಾಹವಾಗಿದೆ ಎನ್ನುವುದು ಅವರ ಒಬ್ಬ ಮಗಳು ಅಂಗವಿಕಲರು ಎನ್ನುವುದು ನಿಜ. ಶ್ರೀ ಈಶ್ವರ ಬೆಂಡಿಗೇರಿ ಎನ್ನುವವರ ಪರಿಚಯ ನನಗೆ ಮತ್ತು ನನ್ನ ಪತಿಗೆ ಇದೆ ಎನ್ನುವುದು ನಿಜ. 1ನೇ ಪ್ರತಿವಾದಿಗೆ ಬೇರೆ ಜಮೀನುಗಳು ಇವೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಪತಿ ನನ್ನ ಹೆಸರಿನಲ್ಲಿ ಲೇವಾದೇವಿ ವ್ಯವಹಾರವನ್ನು ಮಾಡುತ್ತಾರೆ ಎನ್ನುವುದು ಸುಳ್ಳು. ನಾವು ಸಾಕಷ್ಟು ಕೈಗಡ ಸಾಲವನ್ನು ಕೊಟ್ಟು ಅದರ ಭದ್ರತೆದಾಗಿ ಸ್ಥಿರ ಸ್ವತ್ತುಗಳಿಗೆ ಸಂಬಂಧಿಸಿದ ಕ್ರಯ ಕರಾರು ಪತ್ರವನ್ನು ಬರೆಯಿಸಿಕೊಳ್ಳುತ್ತೇವೆ ಎನ್ನುವುದು ಸುಳ್ಳು. 1ನೇ ಪ್ರತಿವಾದಿ ಶ್ರೀ  ಈಶ್ವರ ಬೆಂಡಿಗೇರಿಯವರ ಮೂಲಕ ನಮ್ಮ ಬಳಿ ಬಂದು ಸಾಲ ಕೇಳಿದರು ಎನ್ನುವುದು ಆಗ ಕ್ರಯ ಕರಾರು ಪತ್ರವನ್ನು ಬರೆದುಕೂಟ್ಟರೆ ಹಣ ಕೊಡುತ್ತೇವೆ ಎಂದು ನಾವು ಹೇಳಿದ್ದೇವೆ ಎನ್ನುವುದು ಸುಳ್ಳು. 1 ರಿಂದ 5ನೇ ಪ್ರತಿವಾದಿಯರಿಗೆ ನಾವು 4,75,000-00 ರೂಪಾಯಿ ಹಣವನ್ನು ಕೈಗಡ ಸಾಲವನ್ನಾಗಿ ಕೊಟ್ಟು ಅದರ ಭದ್ರತೆಗಾಗಿ ಕ್ರಯ ಕರಾರು ಪತ್ರವನ್ನು ಬರೆಯಿಸಿಕೊಂಡಿದ್ದೇವೆ ಎನ್ನುವುದು ಸುಳ್ಳು. 4,75,000-00 ರೂಪಾಯಿಗಳಿಗೆ ಪ್ರತಿ ತಿಂಗಳು ಬಡ್ಡಿಯನ್ನು ಕೊಡಬೇಕು ಎಂದು ನೀವು 1 ರಿಂದ 5ನೇ ಪ್ರತಿವಾದಿಯರಿಗೆ ಹೇಳಿದ್ದಿರಿ ಎನ್ನಲಾಗಿ ಅದು ಸುಳ್ಳು ನಾವು ಅವರಿಗೆ ಸಾಲವನ್ನೆ ಕೊಟ್ಟಿಲ್ಲ ಎನ್ನುವರು. 4,75,000-00 ರೂಪಾಯಿ

ಹಣವನ್ನು 5 ತಿಂಗಳೊಳಗಾಗಿ ಮರುಪಾವತಿ ಮಾಡುತ್ತೇವೆ ಎಂದು 1 ರಿಂದ 5ನೇ ಪ್ರತಿವಾದಿಯರು ಒಪ್ಪಿಕೊಂಡಿದ್ದರು ಎನ್ನಲಾಗಿ ನಾವು ಆ ರೀತಿ ಸಾಲವನ್ನು ಕೊಟ್ಟಿಲ್ಲ ಎನ್ನುವರು. 1 ರಿಂದ 5ನೇ ಪ್ರತಿವಾದಿಯರು ಪ್ರತಿ ತಿಂಗಳು ಬಡ್ಡಿಯನ್ನು ನಿಮಗೆ ಕೊಟ್ಟು 5 ತಿಂಗಳೊಳಗಾಗಿ 4,75,000-00 ರೂಪಾಯಿ ಹಣವನ್ನು ವಾಪಸ್ಸ ಕೊಡಲು ನಿಮ್ಮ ಬಳಿ ಬಂದಿದ್ದರು ಎನ್ನಲಾಗಿ ನಾವು ಅವರಿಗೆ ಸಾಲವನ್ನಾಗಿ ಹಣವನ್ನು ಕೊಟ್ಟಿಲ್ಲ ಎನ್ನುವರು. 4,75,000-00 ರೂಪಾಯಿ ಸಾಲದ ಭದ್ರತೆಗಾಗಿ ನಿಪಿ-7 ಕ್ರಯ ಕರಾರು ಪತ್ರವನ್ನು ನೀವು ಬರೆಯಿಸಿಕೊಂಡಿದ್ದೀರಿ ಎನ್ನಲಾಗಿ ಅದು ಸುಳ್ಳು ಎನ್ನುವರು. ನಿಪಿ-7 ಕ್ರಯ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಯಾರ್ಯಾರು ಸಹಿ ಮಾಡಿದ್ದಾರೆ ಎನ್ನುವುದು ನೆನಪಿಲ್ಲ. ನಿಪಿ-7 ಕ್ರಯ ಕರಾರು ಪತ್ರವನ್ನು ಬರೆದುಕೊಡುವ ದಿವಸ ನೀವು ಕೆಲವು ಖಾಲಿ ಕಾಗದಗಳು ಮತ್ತು ವಕಾಲತ್ ನಮೆಯ ಮೇಲೆ 1ನೇ ಪ್ರತಿವಾದಿಯ ಸಹಿಗಳನ್ನು ಪಡೆದಿರಿ ಎನ್ನಲಾಗಿ ಅದು ಸುಳ್ಳು ಎನ್ನುವರು. ನೀವು 1ನೇ ಪ್ರತಿವಾದಿಗೆ 4,75,000-00 ರೂಪಾಯಿ ಮೊತ್ತಕ್ಕೆ ಚೆಕ್ಕನ್ನು ಮಾತ್ರ ಕೊಟ್ಟಿದ್ದೀರಿ ಬೇರೆ ಯಾವುದೇ ಹಣವನು ್ನಕೊಟ್ಟಿಲ್ಲ ಎನ್ನಲಾಗಿ 4,75,000-00 ರೂಪಾಯಿ ಮೊತ್ತಕ್ಕೆ ಒಂದು ಚೆಕ್ಕನ್ನು ಕೊಟ್ಟು 5 ಲಕ್ಷ ರೂಪಾಯಿ ನಗದು ಹಣವನ್ನು ಕೊಟ್ಟಿದ್ದೇವೆ ಎನ್ನುವರು. 5 ಲಕ್ಷ ರೂಪಾಯಿ ನಗದು ಹಣವನ್ನು ನಾವು 1ನೇ ಪ್ರತಿವಾದಿಗೆ ಕೊಟ್ಟಂತಹ ದಿನಾಂಕ, ತಿಂಗಳು ಮತ್ತು ವರ್ಷ ಯಾವುದು ಎನ್ನುವುದು ನೆನಪಿಲ್ಲ. 5 ಲಕ್ಷ ರೂಪಾಯಿ ನಗದು ಹಣವನ್ನು ನಾವು 1ನೇ ಪ್ರತಿವಾದಿಗೆ ಕೊಡುವ ಸಮಯದಲ್ಲಿ ಯಾರ್ಯಾರು ಹಾಜರಿದ್ದರು ಎನ್ನುವುದು ನನಗೆ ನೆನಪಿಲ್ಲ. ಬಹಳಷ್ಟು ಹಣ ಪಾವತಿಸುವಾಗ ನಗದು ಹಣವನ್ನು ಕೊಡುವುದಿಲ್ಲ ಆದರೆ ಚೆಕ್ಕನ್ನು ಕೊಡುತ್ತಾರೆ ಎನ್ನಲಾಗಿ ಆಗ ನಮ್ಮ ಬಳಿ 5 ಲಕ್ಷ ರೂಪಾಯಿ ಹಣ ಇತ್ತು ಅವರು ನಗದು ಹಣಕೊಡಿರಿ ಎಂದು ಕೇಳಿದರು ಆದ್ದರಿಂದ ನಾವು 5 ಲಕ್ಷ ರೂಪಾಯಿ ನಗದು ಹಣವನ್ನು ಅವರಿಗೆ ಕೊಟ್ಟೆವು ಎನ್ನುವರು. ನಿಪಿ-7 ಕ್ರಯ ಕರಾರು ಪತ್ರವಾದ ನಂತರ ನಾವು 5 ಲಕ್ಷ ರೂಪಾಯಿ ನಗದು ಹಣವನ್ನು 1ನೇ ಪ್ರತಿವಾದಿಗೆ ಕೊಟ್ಟೆವು. 5 ಲಕ್ಷ ರೂಪಾಯಿ ನಗದು ಹಣವನ್ನು ಕೊಡಿ ಎಂದು ಕೇಳಲು ನಿಮ್ಮ ಬಳಿ ಯಾರ್ಯಾರು

ಬಂದಿದ್ದರು ಎನ್ನಲಾಗಿ ಅವರು ನಮ್ಮ ಪತಿಗೆ ಟೆಲಿಫೋನ್ ಮಾಡಿ ನಗದು ಹಣವನ್ನು ಕೊಡಿ ಎಂದು ಕೇಳಿದ್ದರು ಆ ಪ್ರಕಾರ ನಾವು ನಗದು ಹಣವನ್ನು ಕೊಟ್ಟಿದ್ದೇವೆ ಎನ್ನುವರು. 5 ಲಕ್ಷ ರೂಪಾಯಿ ನಗದು ಹಣವನ್ನು ಎಲ್ಲಿ ಕೊಟ್ಟಿರಿ ಎಂದು ಪ್ರಶ್ನಿಸಲಾಗಿ ಅದು ನೆನಪಿಲ್ಲ ಎನ್ನುವರು. 5 ಲಕ್ಷ ರೂಪಾಯಿ ನಗದು ಹಣವನ್ನು ಕೊಟ್ಟಾಗ ನಾವು ಬಾಂಡ್ ಪೇಪರ್‌ನಲ್ಲಿ ಪತ್ರವನ್ನು ಬರೆಯಿಸಿಕೊಂಡಿದ್ದೇವೆ. ಆ ರೀತಿ ಪತ್ರವನ್ನು ಬರೆದು ಕೊಡಲು ಬಾಂಡ್ ಪೇಪರ್‌ನ್ನು ಯಾರು ತೆಗೆದುಕೊಂಡು ಬಂದರು ಎನ್ನುವುದು ನನಗೆ ಗೊತ್ತಿಲ್ಲ ಹಾಗೂ ಆ ಬಾಂಡ್‌ಪೇಪರ್ ಮೇಲೆ ಪತ್ರವನ್ನು ಯಾರು ಬರೆದರು ಎನ್ನುವುದು ನನಗೆ ಗೊತ್ತಿಲ್ಲ. ಆ ಪತ್ರವನ್ನು ಬರೆಯುವಾಗ ನಾನು ಹಾಜರಿರಲಿಲ್ಲ ಆದರೆ ನನ್ನ ಪತಿ ಮತ್ತು ಇತರೆಯವರು ಹಾಜರಿದ್ದರು. ಆಗ 1ನೇ ಪ್ರತಿವಾದಿಯೂ ಕೂಡಾ ಹಾಜರಿದ್ದರು ಎನ್ನುವರು. ಒಬ್ಬರ ಹೆಸರನ್ನು ಸ್ವಲ್ಪಮಟ್ಟಿಗೆ ಹೋಲುವಂತಹ ಹಲವಾರು ಜನರು ಇರಬಹುದು ಆದರೆ ಒಬ್ಬ ವ್ಯಕ್ತಿಯ ಸಂಪೂರ್ಣ ಹೆಸರನ್ನೇ ಹೊಂದಿರುವಂತಹ ಬೇರೆ ವ್ಯಕ್ತಿಗಳು ಇರುವುದಿಲ್ಲ. ಒಬ್ಬ ವ್ಯಕ್ತಿಯ ಪೂರ್ಣ ಹೆಸರನ್ನು ಹೊಂದಿರುವಂತಹ ಬೇರೆ ವ್ಯಕ್ತಿಗಳು ಇದ್ದಾರೆ ಎನ್ನುವುದು ಸುಳ್ಳು. ವಾದ ಪತ್ರದ ಶಿರೋನಾಮೆಯಲ್ಲಿ ನಮೂದಿಸಿರುವಂತಹ 1ನೇ ಪ್ರತಿವಾದಿಯ ಹೆಸರು, ವಿಳಾಸ ಮತ್ತು ವಾಸದ ಊರು ಸರಿಯಾಗಿರುತ್ತದೆ. ನಿಪಿ-1ರಲ್ಲಿ ಶ್ರೀಮತಿ ಶಾಂತವ್ವ ಕೋಂ. ಮಳಿವಾಡಗೌಡ ಪಾಟೀಲ ಸಾಃ ಅಮರಗೋಳ ಎಂದು ನಮೂದಿಸಿದೆ ಎನ್ನುವುದು ನಿಜ. ನಿಪಿ-1ರಲ್ಲಿ ನಮೂದಿಸಿರುವಂತಹ ಹೆಸರು 1ನೇ ಪ್ರತಿವಾದಿಯ ಹೆಸರು ಅಲ್ಲ ಎನ್ನುವುದು ಸುಳ್ಳು. 1ನೇ ಪ್ರತಿವಾದಿಯು ನಿಮ್ಮಿಂದ 5ಲಕ್ಷ ರೂಪಾಯಿ ಹಣವನ್ನು ಪಡೆದಿಲ್ಲ ಮತ್ತು ನಿಪಿ-1 ನ್ನು ಬರೆದುಕೊಟ್ಟಿಲ್ಲ ಎನ್ನಲಾಗಿ ಅದು ಸುಳ್ಳು ಎನ್ನುವರು. ವಾದ ಪತ್ರದ ಅನುಸೂಚಿಯಲ್ಲಿ ನಮೂದಿಸಿದಂತಹ ಕ್ಷೇತ್ರ ಮತ್ತು ಚೆಕ್ಕುಬಂದಿ ಸರಿಯಲ್ಲ ಎನ್ನುವುದು ಸುಳ್ಳು. ದಿನಾಂಕಃ 18.02.2010ರಂದು 1 ರಿಂದ 5ನೇ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನಮಗೆ ನಿಪಿ-8ರ ಪ್ರಕಾರ ನೋಟಿಸನ್ನು ಕೊಟ್ಟಿದ್ದರು ಎನ್ನುವುದು ನಿಜ. ನಿಪಿ-8ರ ಪ್ರಕಾರ ನೋಟಿಸನ್ನು ಕೊಟ್ಟ ದಿನದಿಂದ ಈ ದಾವೆ ಹೂಡುವವರೆಗೆ

ನಾವು 1 ರಿಂದ 5ನೇ ಪ್ರತಿವಾದಿಯರ ಮೇಲೆ ಯಾವುದೇ ಕಾನೂನಿನ ಕ್ರಮಗಳನ್ನು ಕೈಗೊಂಡಿಲ್ಲ. ಸಾಮಾನ್ಯವಾಗಿ ಮಿಕ್ಕುಳಿದ ಹಣವನುನ ಎಷ್ಟು ದಿವಸಗಳೊಳಗಾಗಿ ಕೊಡಬೇಕು ಎಷ್ಟು ದಿವಸಗಳೊಳಗಾಗಿ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಡಬೇಕು ಕಬ್ಜಾ ಕೊಡದೆ ಇದ್ದರೆ ಯಾವಾಗ ಕಬ್ಜಾ ಕೊಡಬೇಕು ಎಂದು ಕ್ರಯ ಕರಾರು ಪತ್ರದಲ್ಲಿ ಬರೆಯುತ್ತಾರೆ ಎನ್ನುವುದು ನಿಜ. ದಾವಾ ಆಸ್ತಿಯ ಕಬ್ಜಾವನ್ನು ಯಾವಾಗ ಕೊಡಬೇಕು ಎಂದು ನಿಪಿ-7 ಕ್ರಯ ಕರಾರು ಪತ್ರದಲ್ಲಿ ನಮೂದಿಸಿಲ್ಲ ಎನ್ನುವುದು ನಿಜ. ನಿಪಿ-7ರಲ್ಲಿ ನಮೂದಿಸಿರುವಂತಹ 5 ತಿಂಗಳ ಅವಧಿ ಗತಿಸಿದ ನಂತರ ಈ ದಾವೆ ಹೂಡುವವರೆಗೆ ನೀವು ಯಾವುದೇ ಕ್ರಮಗಳನ್ನು 1 ರಿಂದ 5ನೇ ಪ್ರತಿವಾದಿಯರ ವಿರುದ್ಧ ಕೈಗೊಂಡಿಲ್ಲ ಎನ್ನಲಾಗಿ ಆಗ 1ನೇ ಪ್ರತಿವಾದಿ ಒಬ್ಬ ಮಗಳು ಇನ್ನೂ ಅಪ್ರಾಪ್ತವಯಸ್ಕರಾಗಿದ್ದರು ಆದ್ದರಿಂದ ನಾವು ಆ ರೀತಿಯ ಕ್ರಮವನ್ನು ಕೈಗೊಳ್ಳಲಿಲ್ಲ ಎನ್ನುವರು. 1ನೇ ಪ್ರತಿವಾದಿಯ ಅಲ್ಪವಯಿ ಮಗಳ ಪರವಾಗಿ ಕ್ರಯ ಪತ್ರವನ್ನು ಬರೆಯಿಸಿಕೊಳ್ಳಲು ಅವಶ್ಯಕವಾದಂತಹ ಅನುಮತಿಯನ್ನು ಪಡೆಯುವಂತಹ ಕ್ರಮಗಳನ್ನು ನಾವು ಕೈಗೊಂಡಿಲ್ಲ. ಸದರಿ 1ನೇ ಪ್ರತಿವಾದಿಯ ಅಲ್ಪವಯಿ ಮಗಳ ಪರವಾಗಿ ಕ್ರಯ ಪತ್ರವನ್ನು ಬರೆದು ಕೊಡಲು ಅನುಮತಿ ಪಡೆದುಕೊಳ್ಳಿ ಎಂದು ನೀವು 1 ರಿಂದ 5ನೇ ಪ್ರತಿವಾದಿಯರನ್ನು ವಿನಂತಿಸಿದಿರಿ ಎನ್ನಲಾಗಿ ಅದು ನೆನಪಿಲ್ಲ ಎನ್ನುವರು.

ನಿಪಿ-7ರ ಕ್ರಯ ಕರಾರು ಪತ್ರವಾಗುವಾಗ ನೀವು 1ನೇ ಪ್ರತಿವಾದಿಯ ಸಹಿಗಳನ್ನು ಕೆಲವು ಖಾಲಿ ಕಾಗದಗಳು ಮತ್ತು ವಕಾಲತ್ ನಾಮೆಯ ಮೇಲೆ ಪಡೆದಿರಿ ಅವುಗಳನ್ನು ಉಪಯೋಗಿಸಿಕೊಂಡು ಜಿ.ಆ್ಯಂಡ್ ಡಬ್ಲ್ಯೂ 49/2010ನ್ನು ನೀವು ಸಲ್ಲಿಸಿದ್ದೀರಿ ಎನ್ನಲಾಗಿ ಅದು ಸರಿಯಲ್ಲ ಎನ್ನುವರು. ಜಿ.ಆ್ಯಂಡ್ ಡಬ್ಲ್ಯೂ 49/2010 ಸಲ್ಲಿಸಿರುವ ವಿಷಯ 1ನೇ ಪ್ರತಿವಾದಿಗೆ ಗೊತ್ತಾದ ನಂತರ ಅವರು ಆ ಕೇಸಿನಲ್ಲಿ ಅರ್ಜಿಯನ್ನು ಹಾಕಿಕೊಂಡರು ಆಗ ಅದರಲ್ಲಿ ವಿಚಾರಣೆಯಾಗಿ ದಿನಾಂಕಃ 4.02.2011ರಂದು ಸದರಿ ಜಿ.ಆ್ಯಂಡ್ ಡಬ್ಲ್ಯೂ 49/2010 ವಜಾ ಆಯಿತು ಎನ್ನಲಾಗಿ ಅದು ನನಗೆ ಗೊತ್ತಿಲ್ಲ ಎನ್ನುವರು. ದಿನಾಂಕಃ 18.12.2010ರಂದು ಪ್ರತಿವಾದಿಯರು ನಿಮಗೆ ನೋಟಿಸನ್ನು ಕೊಟ್ಟನಂತರ

ನೋಂದಾಯಿತ ಪಾಲು ವಿಭಾಗ ಪತ್ರವನ್ನು ಮಾಡಿಕೊಂಡು ಸರ್ವೇ ನಂಬರ 76/3ರ 2 ಎಕರೆ ಎಂಟಾನೆ ಜಮೀನನ್ನು ಅವರಲ್ಲಿ ಹಂಚಿಕೊಂಡರು ಎನ್ನಲಾಗಿ ಅದಕ್ಕೆ ನಮ್ಮ ವಕೀಲರು ಕೇಸು ಹಾಕಿದ್ದಾರೆ ಎನ್ನುವರು. ಪಾಲು ವಿಭಾಗ ಪತ್ರದ ಆಧಾರದ ಮೇರೆಗೆ ಯಾರ್‍ಯಾರ ಭಾಗಕ್ಕೆ ಯಾವ್ಯಾವ ಜಮೀನು ಬಂದಿತ್ತೋ ಆ ಜಮೀನುಗಳು ಮರುವಿಂಗಡಣೆಯಾದವು ಎನ್ನುವುದು ಮತ್ತು ಅವುಗಳ ಖಾತೆ ಅವರವರ ಹೆಸರಿಗೆ ಬದಲಾವಣೆಯಾದವು ಎನ್ನುವುದು ನನಗೆ ಗೊತ್ತಿಲ್ಲ. ಆ ರೀತಿ ಸಬ್‌ಡಿವಿಜನ್ ಆದಂತಹ ಸ್ವತ್ತುಗಳನ್ನು ಅವರು ಬೇರಯವರಿಗೆ ಈ ದಾವೆಯನ್ನು ಹೂಡುವುದಕ್ಕಿಂತ ಪೂರ್ವದಲ್ಲಿಯೇ ಮಾರಾಟ ಮಾಡಿದ್ದಾರೆ ಆ ರೀತಿ ಖರೀದಿಸುವವರು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದರು ಎನ್ನಲಾಗಿ ನಮಗೆ ಮೊದಲೇ ಕ್ರಯಕರಾರು ಪತ್ರವನ್ನು ಬರೆದುಕೊಟ್ಟಿದ್ದಾರಲ್ಲ ಎನ್ನುವರು. ಆ ರೀತಿ ಖರೀದಿಸಿದವರು ಅವುಗಳನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎನ್ನಲಾಗಿ ಅದು ನನಗೆ ಗೊತ್ತಿಲ್ಲ ಎನ್ನುವರು. ಎರಡನೇ ಭಾರಿ ಖರೀದಿಸುವವರು ಕೂಡಾ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದರು ಎನ್ನಲಾಗಿ ಅದು ನಮಗೆ ಗೊತ್ತಿಲ್ಲ ಆದರೆ ನಮಗೆ ಮೊದಲೇ ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರಲ್ಲ ಎನ್ನುವರು. ಈ ಎಲ್ಲಾ ವ್ಯವಹಾರಗಳು ಈ ದಾವೆಯನ್ನು ಹೂಡುವುದಕ್ಕಿಂತ ಪೂರ್ವದಲ್ಲಿಯೇ ನಡೆದಿವೆ ಎನ್ನಲಾಗಿ ಅದು ಸರಿಯಲ್ಲ ಎನ್ನುವರು. ಈ ದಾವೆ ಹೂಡುವ ಸಮಯದಲ್ಲಿ ದಾವಾ ಆಸ್ತಿಯ ಖಾತೆ 1 ರಿಂದ 5ನೇ ಪ್ರತಿವಾದಿಯರ ಹೆಸರಿನಲ್ಲಿ ಇರಲಿಲ್ಲ ಎನ್ನಲಾಗಿ ಅದು ಗೊತ್ತಿಲ್ಲ ಎನ್ನುವರು. ನಿಪಿ-14 7ನೇ ಪ್ರತಿವಾದಿಯು 6ನೇ ಪ್ರತಿವಾದಿಗೆ ದಿನಾಂಕಃ 23.05.2013ರಂದು ಬರೆದುಕೊಟ್ಟಂತಹ ಕ್ರಯ ಪತ್ರದ ದೃಢಿಕೃತ ನಕಲು ಆಗಿರುತ್ತದೆ. ಈ ದಾವೆ ಹೂಡುವ ಸಮಯದಲ್ಲಿ 1 ರಿಂದ 5ನೇ ಪ್ರತಿವಾದಿಯರು ದಾವಾ ಆಸ್ತಿಯ ಮಾಲೀಕರಾಗಿರಲಿಲ್ಲ ಮತ್ತು ಅದು ಅವರ ಸ್ವಾದೀನದಲ್ಲಿ ಇರಲಿಲ್ಲ ಎನ್ನಲಾಗಿ ಅದು ಸರಿಯಲ್ಲ ಎನ್ನುವರು. ನಿಪಿ-14 ರಿಂದ ನಿಪಿ-28ರ ವ್ಯವಹರಣೆಗಳು ಈ ದಾವೆ ಹೂಡುವುದಕ್ಕಿಂತ ಪೂರ್ವದಲ್ಲಿ ಆಗಿವೆ. ನಿಪಿ-7ನ್ನು ಹಣದ ಭದ್ರತೆಗಾಗಿ ಬರೆದುಕೊಟ್ಟಿದ್ದಾರೆ ಎನ್ನುವುದು ಸುಳ್ಳು.

4,75,000-00 ರೂಪಾಯಿ ಹಣವನ್ನು ನಮಗೆ ಮರುಪಾವತಿ ಮಾಡಲು 1 ರಿಂದ 5ನೇ ಪ್ರತಿವಾದಿಯರು ನಮ್ಮ ಮನೆಯ ಬಳಿಗೆ ಬಂದಿದ್ದರು ಎನ್ನುವುದು ಸುಳ್ಳು. ಆಗ ಬಡ್ಡಿ ಲೆಕ್ಕಾಚಾರದ ವಿಚಾರವಾಗಿ ನಿಮ್ಮ ಮತ್ತು ಅವರ ಮಧ್ಯ ವ್ಯತ್ಯಾಸ ಬಂದಿತು ಎನ್ನಲಾಗಿ ನಾವು ಬಡ್ಡಿಗಾಗಿ ಹಣವನ್ನು ಕೊಟ್ಟಿಲ್ಲ ಎನ್ನುವರು. ಇಂದಿಗೂ ಕೂಡಾ 4,75,000-00 ರೂಪಾಯಿ ಹಣವನ್ನು ನಿಮಗೆ ಕೊಡಲು 1 ರಿಂದ 5ನೇ ಪ್ರತಿವಾದಿಯರು ಸಿದ್ಧರಿದ್ದಾರೆ ಎನ್ನಲಾಗಿ ನಾವು ಆ ಹಣವನ್ನು ಸಾಲವನ್ನಾಗಿ ಕೊಟ್ಟಿಲ್ಲ ಎನ್ನುವರು. ಹಣದ ಭದ್ರತೆಗಾಗಿ ನಿಪಿ-7ನ್ನು ಬರೆದುಕೊಟ್ಟಿದ್ದಾಗ್ಯೂ ಅದೇ ಪತ್ರವನ್ನು ದುರುಪಯೋಗ ಮಾಡಿಕೊಂಡು ನೀವು ಈ ಕೇಸನ್ನು ಹಾಕಿದ್ದೀರಿ ಎನ್ನಲಾಗಿ ಅದು ಸುಳ್ಳು ಎನ್ನುವರು. ನಮ್ಮ ಮತ್ತು 1 ರಿಂದ 5ನೇ ಪ್ರತಿವಾದಿಯರ ಮಧ್ಯ ಹಣದ ವ್ಯವಹಾರ ಮಾತ್ರ ಆಗಿದೆ ಎನ್ನುವುದು ಸುಳ್ಳು.

ದಾವಾ ಆಸ್ತಿ ಫಲವತ್ತಾದ ಜಮೀನು ಮತ್ತು ಕಿಮ್ಮತ್ತಿನ ಜಮೀನು ಎನ್ನಲಾಗಿ ಇರಬಹುದು ಆದರೆ ಅವರು ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎನ್ನುವರು. ದಾವಾ ಆಸ್ತಿಯ ಹತ್ತಿರದಲ್ಲಿ ಎ.ಪಿ.ಎಂ.ಸಿ. ಮಾರುಕಟ್ಟೆ ಇದೆ ಎನ್ನುವುದು ನಿಜ. 2010ನೇ ಸಾಲಿನಲ್ಲಿ ದಾವಾ ಆಸ್ತಿಯ ಅಕ್ಕಪಕ್ಕದ ಜಮೀನುಗಳ ಬೆಲೆ ಪ್ರತಿ ಎಕರೆಗೆ 20 ಲಕ್ಷ ರೂಪಾಯಿ ಇತ್ತು ಎನ್ನಲಾಗಿ ಇರಬಹುದು ಆದರೆ ಅವರು ದಾವಾ ಆಸ್ತಿಯನ್ನು ನಮಗೆ ಮಾರಾಟ ಮಾಡಲು ಒಪ್ಪಿ ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ಎನ್ನುವರು. ದಾವಾ ಆಸ್ತಿ ಕಿಮ್ಮತ್ತಿನ ಜಮೀನು ಆಗಿರುವುದರಿಂದ ನಿಪಿ-7ರಲ್ಲಿ ನಮೂದಿಸಿರುವ ಹಣಕ್ಕೆ ಮಾರಾಟ ಮಾಡುವ ಅವಶ್ಯಕತೆ 1 ರಿಂದ 5ನೇ ಪ್ರತಿವಾದಿಯರಿಗೆ ಬಂದಿರಲಿಲ್ಲ ಎನ್ನಲಾಗಿ ಅದು ಸುಳ್ಳು ಎನ್ನುವರು. 5ನೇ ಪ್ರತಿವಾದಿಯ ವಿವಾಹ ಯಾವಾಗ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿಯ ವಿವಾಹವನ್ನು ಅವರ ತಂದೆಯ ಜೀವಿತಾವಧಿಯಲ್ಲಿ ದಿನಾಂಕಃ 13.05.2007ರಂದು ಮಾಡಿರುತ್ತಾರೆ ಎನ್ನನಲಾಗಿ ಇರಬಹುದು ಎನ್ನುವರು. 1 ರಿಂದ 5ನೇ ಪ್ರತಿವಾದಿಯರಿಗೆ ಸ್ವಲ್ಪ ಹಣದ ಅಡಚಣೆ ಇದ್ದುದ್ದರಿಂದ ನಿಮ್ಮಿಂದ ಸಾಲವನ್ನು ಪಡೆದರು ಎನ್ನಲಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ಕ್ರಯ ಕರಾರು

ಪತ್ರವನ್ನು ಬರೆದುಕೊಟ್ಟರು ಎನ್ನುವರು. ಈ ವ್ಯವಹಾರ ಸಾಲದ ವ್ಯವಹಾರ ಎನ್ನುವುದು ನಿಪಿ-7ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ವ್ಯಕ್ತಿಗಳಿಗೆ ಗೊತ್ತಿದೆ ಎನ್ನಲಾಗಿ ಅದು ಸುಳ್ಳು ಎನ್ನುವರು. ಹಣವನ್ನು ನಿಮಗೆ ಮರುಪಾವತಿ ಮಾಡಿದರೆ ನಿಮಗೆ ಯಾವುದೇ ತೊಂದರೆ ಯಾಗುವುದಿಲ್ಲ ಎನ್ನಲಾಗಿ ನಾವು ಹಣವನ್ನು ಸಾಲವನ್ನಾಗಿ ಕೊಟ್ಟಿಲ್ಲ ಎನ್ನುವರು. ಈ ದಾವೆಯನ್ನು ವಜಾ ಮಾಡಿದರೆ ಯಾವುದೇ ತೊಂದರೆಯಾಗುವುದಿಲ್ಲ ಎನ್ನುವುದು ಸುಳ್ಳು. ಈ ದಾವೆಯನ್ನು ಡಿಕ್ರಿ ಮಾಡಿದರೆ ಪ್ರತಿವಾದಿಯರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎನ್ನುವುದು ಸುಳ್ಳು. ನಿಪಿ-7 ಹಣದ ಭದ್ರತೆಗಾಗಿ ಆದ ದಾಖಲೆಯಾಗಿರುವುದರಿಂದ 1 ರಿಂದ 5ನೇ ಪ್ರತಿವಾದಿಯರು ನೋಟಿಸು ಕೊಟ್ಟ ನಂತರ ಈ ದಾವೆ ಹೂಡುವವರೆಗೆ ನೀವು ಯಾವುದೇ ಕ್ರಮ ಕೈಗೊಂಡಿಲ್ಲ, ವಾಟ್ನಿ ಪತ್ರಕ್ಕೆ ಮತ್ತು ಖರೀದಿ ಪತ್ರಕ್ಕೆ ಆಕ್ಷೇಪಣೆಗಳನ್ನು ಎತ್ತಿಲ್ಲ ಎನ್ನಲಾಗಿ ಅದು ಸುಳ್ಳು ಎನ್ನುವರು.

**ಪಾಟೀಸವಾಲು 6 ಮತ್ತು 7ನೇ ಪ್ರತಿವಾದಿಯ ಪರ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೆ ಕೆ ಸರಿ ಅದೆ, ನನ್ನ ಸಮಕ್ಷಮ,

2ನೇ ಹೆಚ್ಚುವರಿ ಹಿ. ದಿ. ನ್ಯಾಯಾಧೀಶರು, ಹುಬ್ಬಳ್ಳಿ.